# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 328 |
| ಮಾನ್ಯ ಸದಸ್ಯರ ಹೆಸರು | | ಶ್ರೀ ಆರ್. ಧರ್ಮಸೇನ |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 12-07-2018 |
| ಪ್ರಶ್ನೆ | | ಉತ್ತರ |
| (ಅ) | ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳ ಹುದ್ದೆ ಎಷ್ಟು ದಿನಗಳಿಂದ ಖಾಲಿ ಇದೆ; ಇದುವರೆಗೆ ಎಷ್ಟು ಜನ ಪ್ರಭಾರಿ ಉಪಕುಲಪತಿಗಳು ತಾತ್ಕಾಲಿಕವಾಗಿ ಕೆಲಸ ಮಾಡಿದ್ದಾರೆ; | ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳ ಹುದ್ದೆಯು ದಿನಾಂಕ: 11-01-2017ರಿಂದ ಖಾಲಿ ಇದೆ. ಇದುವರೆಗೆ ಈ ಕೆಳಕಂಡ ನಿಕಾಯಗಳ ಡೀನರು ಜೇಷ್ಠತೆಯ ಆಧಾರದ ಮೇಲೆ ಕುಲಾಧಿಪತಿಗಳ ಅನುಮೋದನೆಯೊಂದಿಗೆ ಪ್ರಭಾರ ಕುಲಪತಿಗಳಾಗಿ ಕಾರ್ಯವನ್ನು ನಿರ್ವಹಿಸಿದ್ದಾರೆ.<br>1. ಪ್ರೊ. ಯಶವಂತ ಡೋಂಗ್ರೆ, ವಾಣಿಜ್ಯ ನಿಕಾಯದ ಡೀನರು (ದಿನಾಂಕ: 11-01-2017ರಿಂದ 18-02-2017ರವರೆಗೆ)<br>2. ಪ್ರೊ. ದಯಾನಂದ ಎ. ಮಾನೆ, ಕಲಾ ನಿಕಾಯದ ಡೀನರು (ದಿನಾಂಕ: 18-02-2017ರಿಂದ 22-11-2017ರವರೆಗೆ)<br>3. ಪ್ರೊ. ಸಿ ಬಸವರಾಜು, ಕಾನೂನು ನಿಕಾಯದ ಡೀನರು (ದಿನಾಂಕ: 23-11-2017ರಿಂದ 02-05-2018ರವರೆಗೆ)<br>4. ಡಾ: ನಿಂಗಮ್ಮ ಸಿ. ಬೆಟ್ಟಸೂರು, ಶಿಕ್ಷಣ ನಿಕಾಯದ ಡೀನರು (ದಿನಾಂಕ: 03-05-2018ರಿಂದ 26-05-2018ರವರೆಗೆ)<br>5. ಪ್ರೊ. ಟಿ.ಕೆ. ಉಮೇಶ್, ವಿಜ್ಞಾನ ಮತ್ತು ತಂತ್ರಜ್ಞಾನ ಡೀನರು (ದಿನಾಂಕ: 26-05-2018ರಿಂದ ಇದುವರೆವಿಗೆ ಕಾರ್ಯನಿರ್ವಹಿಸುತ್ತಿದ್ದಾರೆ.) |
| (ಆ) | ಖಾಯಂ ಆಗಿ ಉಪಕುಲಪತಿಗಳನ್ನು ನೇಮಕ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು? (ಯಾವಾಗ ನೇಮಕ ಮಾಡಲಾಗುವುದು) | ನೂತನ ಕುಲಪತಿಗಳ ಆಯ್ಕೆ ಮಾಡುವ ಸಲುವಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 14(2)ರನ್ವಯ ಶೋಧನಾ ಸಮಿತಿಯನ್ನು ರಚಿಸಲಾಗಿರುತ್ತದೆ.<br>ಮೈಸೂರು ವಿಶ್ವವಿದ್ಯಾಲಯದ ನೂತನ ಕುಲಪತಿಗಳ ನೇಮಕಾತಿ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಈಗಾಗಲೇ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಸದರಿ ಅರ್ಜಿಗಳನ್ನು ಪರಿಶೀಲಿಸಿ, ಸೂಕ್ತ ಶಿಫಾರಸ್ಸು ಮಾಡುವ ಸಲುವಾಗಿ ಶೋಧನಾ ಸಮಿತಿಯ ಸಭೆಯನ್ನು ಏರ್ಪಡಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಇಡಿ 240 ಯುಎನ್ಇ 2018

(ಜಿ.ಟಿ. ದೇವೇಗೌಡ)
ಉನ್ನತ ಶಿಕ್ಷಣ ಸಚಿವರು.